(ಈ ಹಂತದಲ್ಲಿ ಜನತಾ ದಳ (ಯು) ಮತ್ತು (ಎಸ್) ಪರಿವಾರದ ಕೆಲವು ಸದಸ್ಯರುಗಳು ಪ್ರತಿಭಟನೆ ಮಾಡಿ ಸದನದಿಂದ ಹೊರ ನಡೆದರು)

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೆ, ಇದು ಒಂದು ಪಾರ್ಟಿಯ ಕೆಲಸ. ಇದೊಂದು ಶಾಸನ ಸಭೆಯ ಕೆಲಸ. ನಾವೆಲ್ಲಾ ಇಷ್ಟು ಜನ ಬಂದಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೆ, ಅವರು ಬರುವ ತನಕ ಸಭೆಯನ್ನು ಅಡ್ಜರ್ನ್ ಮಾಡಿ. ಒಂದು ಪ್ರಮುಖ ಪಕ್ಷದವರು ಪ್ರತಿಭಟನೆ ಮಾಡಿ ಆಚೆ ಹೋಗಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಜನತಾ ಪರಿವಾರದವರು ಇಲ್ಲಿ ಇರುವಂತಹ ಪರಿಸ್ಥಿತಿ ನೋಡಿಕೊಂಡು ಪ್ರತಿಭಟನೆ ಮಾಡಿ ಹೊರಗಡೆ ಹೋಗಿದ್ದಾರೆ. ಇಂತಹ ಸಮಯದಲ್ಲಿ, ಇವತ್ತು ತಾವೇ ಅವರು ಏಕೆ ಬಂದಿಲ್ಲವೆಂದು ಕೇಳಿದಾಗ ರ್‍ಯಾಲಿ ಇದೆ ಎಂದು ಹೇಳಿದಿರಿ.

ಅಧ್ಯಕ್ಷರು : ಇರುವ ವಿಷಯ ಹೇಳಬೇಕಲ್ಲಾ. ಸುಳ್ಳು ಏಕೆ ಹೇಳಬೇಕು?

ಶ್ರೀ ಜಗದೀಶ್ ಶೆಟ್ಟರ್ :- ಉದ್ದೇಶ ಏನಿದೆ ಅಮೆರಿಕಾ ಮತ್ತು ಇರಾಕ್‌ಮೇಲೆ.....

ಅಧ್ಯಕ್ಷರು :- ಮೊನ್ನೆ ಒಂದು ಸಲ ಮಲ್ಲೇಶ್ವರಂನಲ್ಲಿ ನಿಮ್ಮ ಕಡೆಯಿಂದ ಮೀಟಿಂಗ್ ಇದ್ದಾಗ ನಾವು ಬೇಗ ಹೋಗಬೇಕು ಸಭೆಯನ್ನು ಅಡ್ಜರ್ನ್ ಮಾಡಬೇಕು ಎಂದಾಗ ಅವರು ಆಲೋ ಮಾಡಲಿಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ :- ರ್‍ಯಾಲಿ ಇದೆಯಲ್ಲಾ ಈಗ ಒಂದು ತಾಸು ಬಿಟ್ಟುಬಿಡಿ. ಮಾನ್ಯ ಅಧ್ಯಕ್ಷರೇ, ಈಗ ಅವರಿಗೆ ರ್‍ಯಾಲಿ ಇದೆಯೆಂದು ಹೇಳಿದ್ದಾರೆ, ತಾವು ಸಭೆಯನ್ನು ಅಡ್ಜರ್ನ್ ಮಾಡಿ, ಅವರೆಲ್ಲರೂ ಬರಲಿ, ಮಂತ್ರಿಗಳು, ಶಾಸಕರು, ಸಭೆಗೆ ಬರಲಿ, ಇಲ್ಲಿ ಅವರ ಪಕ್ಷದಿಂದ 150 ಜನರು ಇರುವಂಥಾದ್ದು ಎಷ್ಟು ಜನರು ಇದ್ದಾರೆಂಬುದನ್ನು ಅಧ್ಯಕ್ಷರೇ, ತಾವೇ ನೋಡಿ.

ಅಧ್ಯಕ್ಷರು :- ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನಾವು ಏಕೆ ಸಮಯವನ್ನು ಕಳೆಯಬೇಕು, ನೋಡಿ ಈಗ ಸಭೆಯಲ್ಲಿ 56 ಜನ ಮಂತ್ರಿಗಳು ಇದ್ದಾರೆ, ಈಗ ತಾವು ಅಡ್ಜರ್ನ್‌ಮೆಂಟ್ ಮೋಷನ್ ಏನು ರೈಸ್ ಮಾಡಿದ್ದೀರಿ, ಅದಕ್ಕೆ ಸರ್ಕಾರ ಉತ್ತರಿಸಲು ರೆಡಿಯಾಗಿದೆ, ಈಗ ನೀವು ರೈಸ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಇಲ್ಲಿ ನಾಲ್ಕು ಜನ ಮಂತ್ರಿಗಳು ಇದ್ದಾರೆ.

ಅಧ್ಯಕ್ಷರು :- ನೀವು ವಿಷಯವನ್ನು ರೈಸ್ ಮಾಡಿ ಹೇಳಲು ಸರ್ಕಾರದವರು ರೆಡಿಯಾಗಿದ್ದಾರೆ. ಅಷ್ಟರಲ್ಲಿ ಎಲ್ಲರೂ ಸಭೆಗೆ ಬರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಪ್ರಮುಖ ವಿರೋಧಪಕ್ಷದವರು ಹೊರಗಡೆ ಹೋಗಿದ್ದಾರೆ. ಅವರನ್ನು ಸಭೆಗೆ ಕರೆಸಬೇಕು, ಇಲ್ಲಿ ಪ್ರಮುಖ ವಿರೋಧ ಪಕ್ಷದವರು ಹೊರಗಡೆ ಇರುವಾಗ ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವಂಥಾದ್ದು ಸರಿಯಲ್ಲ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :- ಅದರಿಂದ ಏನಾಯಿತು. ಅವರ ಬಗ್ಗೆ ಅಷ್ಟೊಂದು ಸಿಂಪಥಿ ಬೇಡ.....

(ಗೊಂದಲ)